# ಜಲವೇ ಜೀವನ ನಬಾರ್ಡ್ ಜಲ ಅಭಿಯಾನ

**ಕೊರಟಗೆರೆ**

''ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್) ಹಾಗೂ ಆವಿಷ್ಕಾರ್ ಸಂಸ್ಥೆ ಸಹಯೋಗದೊಂದಿಗೆ ಜಲವೇ ಜೀವನ ನಬಾರ್ಡ್ ಜಲ ಅಭಿಯಾನ ಎಂಬ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಇತ್ತೀಚಿಗೆ ಕೊರಟಗೆರೆ ತಾಲ್ಲೂಕಿನ ಎಲೆರಾಂಪುರ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮಕ್ಕೆ ಜಿ.ಎಸ್. ವೀರಭದ್ರನ್, ಜಿಲ್ಲಾ ಅಭಿವೃದ್ಧಿ ಪ್ರಬಂಧಕರು (ನಬಾರ್ಡ್) ಈ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿದರು, ಹಾಗೂ ಎಲೆ ರಾಂಪುರ ಗ್ರಾಮ ಪಂಚಾಯಿತಿ ಸದಸ್ಯರಾದ ಹನುಮಂತರಾಜು, ಹಾಗೂ ವ್ಯವಸಾಯ ಸೇವಾ ಸಹಕಾರ ಸಂಘ ಕಾರ್ಯದರ್ಶಿ ರಾಘವೇಂದ್ರ, ಮತ್ತು ರೈತ ಸಂಘದ ಅಧ್ಯಕ್ಷ ರಂಗಹನುಮಯ್ಯ, ಹಾಗೂ ಪ್ರಾಥಮಿಕ ಪಾಠಶಾಲೆಯ ಎಲ್ಲಾ ವಿದ್ಯಾರ್ಥಿಗಳು, ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

ಈ ಕಾರ್ಯಕ್ರಮವನ್ನು ಉದ್ದೇಶಿಸಿ ಜಿ.ಎಸ್. ವೀರಭದ್ರನ್ ರವರು ಜಲವೇ ಜೀವನ ಎನ್ನುವ ಕಾರ್ಯಕ್ರಮವನ್ನು ನಬಾರ್ಡ್ ಈ ಅಭಿಯಾನವನ್ನು ಭಾರತದೇಶದಲ್ಲಿ 21 ರಾಜ್ಯಗಳಲ್ಲಿ, 200 ಜಿಲ್ಲೆಗಳ, 8000 ಜಲಕೃಷಿ ಜಲಧೂತರನ್ನು ಆಯ್ಕೆ ಮಾಡಿಕೊಂಡು ಅವರಿಗೆ ತರಬೇತಿ ನೀಡಿ ಜಲವೇ ಜೀವನ ನಬಾರ್ಡ್ ಜಲ ಅಭಿಯಾನವನ್ನು ಅವರ ಮುಖಾಂತರ ಒಂದು ಲಕ್ಷ ಹಳ್ಳಿಗಳಲ್ಲಿ ಅದರಲ್ಲಿ ಮುಖ್ಯವಾಗಿ ಬರಪೀಡಿತ ಜಲಕ್ಷಾಮ ಇರುವಂತಹ ಹಳ್ಳಿಗಳಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಅಭಿಯಾನದ ಉದ್ದೇಶ ನೀರಿನ ಸಂರಕ್ಷಣೆ ಅದರಲ್ಲೂ ಮುಖ್ಯವಾಗಿ ವ್ಯವಸಾಯಕ್ಕೆ ಸಂಬಂಧಪಟ್ಟಂತೆ ನಮ್ಮ ಹಳ್ಳಿಗಳಲ್ಲಿ ಮಣ್ಣು ಮತ್ತು ನೀರಿನ ಸಂರಕ್ಷಣೆ ನೀರಿನ ನಿರ್ವಹಣೆ, ಮಳೆನೀರಕೊಯ್ಲು, ಅಂತರ್ಜಲ ಅಭಿವೃದ್ಧಿ, ಕಡಿಮೆ ನೀರಿನಲ್ಲಿ ಕೃಷಿ ಬೆಳೆಗಳನ್ನು ಬೆಳೆಯುವ ತಾಂತ್ರಿಕತೆ ಬಗ್ಗೆ ಈ ಅಭಿಯಾನದಲ್ಲಿ ಜಾಗೃತಿ ಮೂಡಿಸಲಾಗುವುದು. ಈ ಅಭಿಯಾನದಲ್ಲಿ ಮುಖ್ಯವಾಗಿ ಕೃಷಿ ಜಲದೂತರು ಗ್ರಾಮಕ್ಕೆ ಭೇಟಿ ನೀಡಿ ಜಲ ಸೇವಕರನ್ನು ಆಯ್ಕೆ ಮಾಡಿಕೊಂಡು ಅವರ ಮುಖಾಂತರ ಗ್ರಾಮದ ಸಮುದಾಯ ಸಂಘಟನೆಗಳು ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಗ್ರಾಮದಲ್ಲಿ ಜಾಥಾ ನಡೆಸಿ ನಂತರ ಗ್ರಾಮದ ಸಂಪನ್ಮೂಲ ನಕ್ಷೆ, ನೀರಿನ ಮೂಲಗಳ ಸಂರಕ್ಷಣೆ ಬಗ್ಗೆ ರೈತರೊಂದಿಗೆ ಹಾಗೂ ಸಮುದಾಯದೊಂದಿಗೆ ಸಂವಾದ ನಡೆಸಿ ಜಲ ಮೂಲಗಳನ್ನು ಅಭಿವೃದ್ಧಿ ಪಡಿಸಲು ಮಾಹಿತಿ ನೀಡಲಾಗುವುದು ಎಂದರು.




ಭಾರತದೇಶದಲ್ಲಿ 21 ರಾಜ್ಯಗಳಲ್ಲಿ, 200 ಜಿಲ್ಲೆಗಳ, 8000 ಜಲಕೃಷಿ ಜಲಧೂತರನ್ನ ಆಯ್ಕೆ ಮಾಡಿಕೊಂಡು ಅವರಿಗೆ ತರಬೇತಿ ನೀಡಿ ಜಲವೇ ಜೀವನ ನಬಾರ್ಡ್ ಜಲ ಅಭಿಯಾನವನ್ನು ಅವರ ಮುಖಾಂತರ ಒಂದು ಲಕ್ಷ ಹಳ್ಳಿಗಳಲ್ಲಿ ಅದರಲ್ಲಿ ಮುಖ್ಯವಾಗಿ ಬರಪೀಡಿತ ಜಲಕ್ಷಾಮ ಇರುವಂತಹ ಹಳ್ಳಿಗಳಲ್ಲಿ ಈ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ

# ಕುರಿಗಳ ಮೇಲೆ ಚಿರತೆ ದಾಳಿ

>>>1ನೇ ಪುಟದಿಂದ ಪಡೆದು ಸಾರ್ವಜನಿಕರಿಗೆ ಆತಂಕ ಮೂಡಿಸಿದ ಬೆನ್ನಲ್ಲೇ ಶನಿವಾರ ಪುಟ್ಟಸಂದ್ರ ಹಾಗೂ ಹೊಸಹಳ್ಳಿ ಗ್ರಾಮದ ದೇವರಾಜು ಎಂಬ ರೈತ ತನ್ನ ಜಮೀನಲ್ಲಿ ಕುರಿ ಮೇಯಿಸುತ್ತಿದಂತಹ ಸಂದರ್ಭದಲ್ಲಿ ಚಿರತೆ ದಾಳಿ ನಡೆಸಿ 5 ಕುರಿಗಳನ್ನು ತಿಂದು ಹಾಕಿರುವುದು ಸಾರ್ವಜನಿಕರಲ್ಲಿ ಆತಂಕ ಸೃಷ್ಟಿಸಿದೆ. ಜಾನುವಾರು ಹಾಗೂ ಕುರಿಗಳನ್ನು ಮೇಯಿಸುವುದರಲ್ಲಿ ಜನರು ಸಹ ಒಬ್ಬಂಟಿಯಾಗಿ ಜಮೀನುಗಳ ಬಳಿ ಓಡಾಡಲು ಹೆದರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಚಿರತೆ ದಾಳಿಯಿಂದ ತತ್ತರಗೊಂಡು ಆತಂಕದಲ್ಲಿರುವ ಸಾರ್ವಜನಿಕರು ಅರಣ್ಯ ಇಲಾಖೆಯ ವಿರುದ್ಧ ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಮೇಕೆ ಹಾಗೂ ಕುರಿಗಳನ್ನು ಕಳೆದು ಕೊಂಡ ರೈತರು ಚಿರತೆಯನ್ನು ಕಣ್ಣಾರೆ ಕಂಡು ಪ್ರಾಣ ಉಳಿಸಿಕೊಂಡಿರುವ ಬೆನ್ನಲ್ಲೇ ಇನ್ನಿತರ ಅವಘಡಗಳನ್ನು ತಡೆಯುವಂತೆ ಅರಣ್ಯ ಇಲಾಖಾಧಿಕಾರಿಗಳಿಗೆ ಮನವಿ ಮಾಡಿಕೊಂಡರೂ ಪ್ರಯೋಜನವಾಗಿರುವುದಿಲ್ಲ, ಚಿರತೆಯನ್ನು ಸೆರೆ ಹಿಡಿಯುವಂತೆ ಕಳೆದ 1ತಿಂಗಳುಗಳಿಂದಲೂ ಮನವಿ ಮಾಡಿಕೊಂಡರು ನಿರ್ಲಕ್ಷ್ಯ ವಹಿಸುತ್ತಿದ್ದು, ಒಂದು ಪ್ರದೇಶದಲ್ಲಿ ಬೋನ್ ಇಟ್ಟು ನಂತರ ಕೈ ಚೆಲ್ಲಿ ಕುಳಿತಿದ್ದರಿಂದ ಇಷ್ಟೆಲ್ಲ ಘಟನೆಗಳಿಗೆ ಕಾರಣವಾಗಿದೆ. ಅದೃಷ್ಟವಶಾತ್ ಲಿಂಗಾಪುರ, ಮದ್ಯವೆಂಕಟಾಪುರ, ಪುಟ್ಟಸಂದ್ರ ಹಾಗೂ ಹೊಸಹಳ್ಳಿ ಗ್ರಾಮದಲ್ಲಿ ರೈತರುಗಳು ಬದುಕುಳಿದಿದ್ದು, ಜನರ ಜೀವಕ್ಕೆ ಬೆಲೆ ಇಲ್ಲವೇ ಎಂದು ಅರಣ್ಯ ಇಲಾಖೆ ವಿರುದ್ಧ ಹತ್ತಾರು ಗ್ರಾಮದ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ಹಿಂಡಲಗಾ ಜೈಲಿಗೆ ಬಾಂಗ್ಲಾ ಅಧಿಕಾರಿ ಭೇಟಿ

**ಬೆಂಗಳೂರು:** ಬಾಂಗ್ಲಾದೇಶದ ಆಂತರಿಕ ಸುರಕ್ಷಾ ವಿಭಾಗದ ಅಧಿಕಾರಿಗಳು ಮತ್ತು ಬಾಂಗ್ಲಾದೇಶ ದೂತಾವಾಸದ ಅಧಿಕಾರಿಗಳು ಇಂದು ಬೆಳಗಾವಿಯ ಹಿಂಡಲಗಾ ಜೈಲಿಗೆ ಭೇಟಿ ನೀಡಿ, ಇತ್ತೀಚೆಗಷ್ಟೇ ಬಂಧಿಸಲಾದ 11 ಬಾಂಗ್ಲಾದೇಶಿ ನಾಗರಿಕರನ್ನು ವಿಚಾರಣೆಗೊಳಪಡಿಸದರು. ಬೆಳಗಾವಿ ಪೊಲೀಸರು ಇತ್ತೀಚೆಗೆ ಬಾಂಗ್ಲಾದೇಶದ ನಾಗರಿಕರನ್ನು ಮತ್ತು ಅವರಿಗೆ ವೀಸಾಗೆ ಬೇಕಾದ ಆಧಾರ್ ಕಾರ್ಡ್, ಗುರುತಿನ ಚೀಟಿಯನ್ನು ಕೊಡಿಸುವಲ್ಲಿ ಸಹಕರಿಸಿದದವರನ್ನು ಬಂಧಿಸಿದ್ದರು. ಬೆಳಗಾವಿ ಪೊಲೀಸರು ಇದರ ತನಿಖೆಯನ್ನು ಆಂತರಿಕ ಸುರಕ್ಷಾ ವಿಭಾಗಕ್ಕೆ ವಹಿಸಿದ್ದರು.

# ಇಂದು ಅಭಿನಂದನಾ ಸಮಾರಂಭ

**ತುಮಕೂರು**

ಡಾ. ಕವಿತಾಕೃಷ್ಣ ಸಾಹಿತ್ಯ ಮಂದಿರ ಕ್ಯಾತ್ಸಂದ್ರ, ಸುಜ್ಞಾನ ವೇದಿಕೆ ತುಮಕೂರು ಇವರ ವತಿಯಿಂದ ಅಭಿನಂದನಾ ಸಮಾರಂಭವು ಇಂದು ಸಂಜೆ 5.30ಕ್ಕೆ ಕ್ಯಾತ್ಸಂದ್ರದ ಕವಿತಾಕೃಷ್ಣ ಸಾಹಿತ್ಯ ಮಂದಿರದಲ್ಲಿ ಆಯೋಜಿಸಲಾಗಿದೆ.

ಅಧ್ಯಕ್ಷತೆಯನ್ನು ಸಾಹಿತಿ ಡಾ. ಕವಿತಾಕೃಷ್ಣ ವಹಿಸಲಿದ್ದು, ಡಾ.ಎಂ.ವಿ. ನಾಗಣ್ಣ ಅಭಿನಂದನಾ ನುಡಿಗಳನ್ನಾಡುವರು. ಕೆಂಪೇಗೌಡ ಪ್ರಶಸ್ತಿ ಪುರಸ್ಕೃತ ಡಿ.ಎನ್. ನವಿಲೇಶ್ ಅವರನ್ನು ಅಭಿನಂದಿಸಲಾಗುವುದು.

ಮುಖ್ಯ ಅತಿಥಿಗಳಾಗಿ ಕೆ.ಸಿ.ನರಸಿಂಹಮೂರ್ತಿ, ಕಮಲಾ ಬಡ್ಡಿಹಳ್ಳಿ, ಇ. ಲೋಕೇಶ್ ಅವರುಗಳು ಆಗಮಿಸುವರು.

# ಇನ್ನೂ ನೀಗದ ನೀರಿನ ಸಮಸ್ಯೆ

>>>1ನೇ ಪುಟದಿಂದ ಅಂದುಕೊಂಡಂತೆ ಜೂನ್ 3 ರಿಂದ ಎಲ್ಲೆಡೆ ಮುಂಗಾರು ಆರಂಭವಾಗಿದ್ದಿದ್ದರೆ ಈ ವೇಳೆ ಕಳೆ ತೆಗೆಯುವ ಮಟ್ಟಿಗೆ ಬೆಳೆಗಳು ಇರಬೇಕಾಗಿತ್ತು. ಆದರೆ ಆ ಸಮಯದಲ್ಲಿ ಮಳೆಯಾಗದೇ ಸ್ವಲ್ಪ ತಡವಾಗಿ ಮುಂಗಾರು ಪ್ರವೇಶವಾಗಿದ್ದರಿಂದ ವಾಡಿಕೆ ಬಿತ್ತನೆಗೆ ಸ್ವಲ್ಪ ತೊಂದರೆಯಾಗಿದೆ ಎನ್ನುವುದು ರೈತರ ಹೇಳಿಕೆ.

ಕಲಬುರಗಿ, ಬೀದರ್, ಯಾದಗಿರಿ, ಕೊಪ್ಪಳ, ವಿಜಯಪುರ, ಜಿಲ್ಲೆಗಳಲ್ಲಿ ಮಳೆಯಾಗಿದ್ದರಿಂದ ರೈತರು ಬಿತ್ತನೆ ಕಾರ್ಯ ಆರಂಭಿಸಿದ್ದಾರೆ. ಆದರೆ ಕೆಲವೆಡೆ ಮಳೆಯೇ ಇಲ್ಲದೇ ಇನ್ನೂ ಆಕಾಶ ನೋಡುವ ಪರಿಸ್ಥಿತಿ ಬಂದಿದೆ.

ಗ್ರಾಮಗಳಲ್ಲಿ ಆರಂಭಿಸಿದ್ದ ಶುದ್ಧ ಕುಡಿಯುವ ನೀರಿನ ಘಟಕ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ, ಇನ್ನೂ ಹಲವೆಡೆ ಘಟಕಗಳು ಹೆಸರಿಗೆ ಮಾತ್ರ ಇವೆ. ಎಂತಹ ಮಳೆಯೇ ಆಗಲಿ, ಆಗಸ್ಟ್ ಕೊನೆಯವರೆಗೆ ಕುಡಿಯುವ ನೀರಿನ ಕೊರತೆ ನೀಗುವುದಿಲ್ಲ ಎಂದು ಜನರು ಹೇಳುತ್ತಿದ್ದಾರೆ.

ಎಲ್ಲೆಡೆ ಮಳೆಯಾಗುತ್ತದೆ ಎಂದು ಸರ್ಕಾರ ಕುಡಿಯುವ ನೀರು ಪೂರೈಸುವುದನ್ನು ಅಲಕ್ಷ್ಯ ಮಾಡಬಾರದು. ಅಂತರ್ಜಲ ಕುಸಿತದಿಂದಾಗಿ ಬೋರ್‌ವೆಲ್ ಮತ್ತು ಬಾವಿಯಲ್ಲಿ ನೀರು ಇಲ್ಲ, ಇಷ್ಟೊಂದು ಮಳೆಗೆ ಯಾವ ಪ್ರಯೋಜನವೂ ಆಗುವುದಿಲ್ಲ, ಈಗಾಗಲೇ ಮಳೆಯಾಗುತ್ತಿದೆ ಕೆಲವೊಂದು ಪ್ರದೇಶಗಳಲ್ಲಿ ಕುಡಿಯುವ ನೀರು ಪೂರೈಕೆ ಸಾಕು ಎನ್ನುವ ಮಾತುಗಳು ಕೇಳಿಬರುತ್ತಿವೆ. ಆದರೆ ವಾಸ್ತವ ಹಾಗಿರುವುದಿಲ್ಲ, ಸರ್ಕಾರ ಇದನ್ನು ಅರಿಯಬೇಕು.

# ಅರುಣ್ ನೇತ್ರಾವಳಿಗೆ ಅಮೆರಿಕಾದ ಮಾರ್ಕೋನಿ ಪ್ರಶಸ್ತಿ

**ಬೆಂಗಳೂರು:** ಅಂಕೋಲಾ ಮೂಲದ ಡಾ. ಅರುಣ್ ನೇತ್ರಾವಳಿಯವರಿಗೆ ಪ್ರತಿಷ್ಠಿತ ಅಮೆರಿಕಾದ ಮಾರ್ಕೋನಿ ಪ್ರಶಸ್ತಿಯು ಲಭಿಸಿರುವುದು ಅತ್ಯಂತ ಸಂತೋಷದ ಸಂಗತಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ವಿ.ದೇಶಪಾಂಡೆ ಹೇಳಿದ್ದಾರೆ. ಎಂಪೆಗ್ ತಂತ್ರಜ್ಞಾನದಲ್ಲಿ ಮೇರು ಸಾಧನೆಗೈದಿರುವ ಕನ್ನಡಿಗರ ಹೆಮ್ಮೆಯ ಡಾ. ಅರುಣ್ ನೇತ್ರಾವಳಿ ಅವರಿಂದಾಗಿ ಇಡೀ ದೇಶಕ್ಕೆ ಅದರಲ್ಲಿಯೂ ಮುಖ್ಯವಾಗಿ ಕರ್ನಾಟಕಕ್ಕೆ ಅಪಾರ ಹೆಮ್ಮೆಯಾಗಿದೆ. ಭವಿಷ್ಯದಲ್ಲಿ ಡಾ. ಅರುಣ್ ನೇತ್ರಾವಳಿ ಅವರಿಂದ ಇನ್ನಷ್ಟು ಸಾಧನೆಗಳು, ದಾಖಲೆಗಳು ಹೊರಹೊಮ್ಮುವಂತಾಗಿ ಅವರಿಗೆ ಇನ್ನಷ್ಟು ಕೀರ್ತಿ, ಯಶಸ್ಸು ಲಭಿಸುವಂತಾಗಲಿ ಎಂದು ಹೇಳಿದ್ದಾರೆ.

# 1,80,000 ನೋಟ್‌ಬುಕ್ ವಿತರಣೆ

>>>1ನೇ ಪುಟದಿಂದ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು . ನಮ್ಮ ಕಾಲದಲ್ಲಿ ಇಂತಹ ಸೌಲಭ್ಯಗಳಿರಲಿಲ್ಲ ಆದರೆ ಉತ್ತಮವಾದಂತಹ ಶಿಕ್ಷರು ಇದ್ದರು ಅವರಿಂದ ಇಂದು ನಾವು ಈ ಎತ್ತರಕ್ಕೆ ಬೆಳೆಯಲು ಸಾಧ್ಯವಾಯಿತು. ಗ್ರಾಮೀಣ ಭಾಗದಿಂದ ಬಂದಂತಹ ಮುಖ್ಯ ಮಂತ್ರಿ ಸಿದ್ದರಾಮಯ್ಯನವರು ಇಂದು ವಿದ್ಯಾರ್ಥಿಗಳಿಗಾಗಿ ಅನೇಕ ಜನಪರ ಯೋಜನೆಗಳನ್ನು ಜಾರಿಗೊಳಿಸಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದಾರೆ ಎಂದರು.

ಉಪವಿಭಾಗಾಧಿಕಾರಿ ಡಾ.ವೆಂಕಟೇಶಯ್ಯ ಮಾತನಾಡಿ ಸರಕಾರಿ ಶಾಲೆಗಳು ಗುಣಮಟ್ಟದ ಶಿಕ್ಷಣ ನೀಡುತ್ತಿವೆ. ಮಕ್ಕಳು ಆಲೋಚನಾ ಶಕ್ತಿ ಬೆಳೆಸಿಕೊಳ್ಳಬೇಕು ಹಾಗೂ ಸಾಮಾಜಿಕ ಜಾಲ ತಾಣಗಳಲ್ಲಿ ಹರಿದಾಡುವ ಅನಾವಶ್ಯಕ ಸುದ್ದಿಗಳ ಬಗ್ಗೆ ಗಮನಹರಿಸದಂತೆ ತಿಳಿಸಿದರು. ಇದೊಂದು ತುಂಬಾ ಮುಖ್ಯವಾದ ಕಾರ್ಯಕ್ರಮವಾಗಿದೆ ತಮ್ಮ ಜೀವನದಲ್ಲಿ ನೋವುಂಡವರು ಮಾತ್ರ ಇಂತಹ ಜನಪರ ಯೋಜನೆಗಳನ್ನು ಜಾರಿಗೆ ತರಲು ಸಾಧ್ಯ. ಸುಮಾರು 15 ವರ್ಷಗಳ ಹಿಂದೆ ನಾವು ಶಾಲೆಗಳಲ್ಲಿದ್ದ ಅನುಭವವಾಗುತ್ತಿದೆ ಎಂದರು. ಕಾರ್ಯಕ್ರಮದಲ್ಲಿ ಪುಸ್ತಕ ವಿತರಣೆಯ ರೂವಾರಿಯಾದ ವಿದ್ಯಾರ್ಥಿ ಅಂಜನ್ ಮೂರ್ತಿ ಸನ್ಮಾನಿಸ ಲಾಯಿತು. ಮತ್ತು ವಿದ್ಯಾರ್ಥಿಗಳಿಗೆ ಸಾಂಕೇತಿಕವಾಗಿ ನೋಟ್ ಪುಸ್ತಕಗಳನ್ನು ವಿತರಿಸಲಾಯಿತು.

ಜಿಪಂ ಸದಸ್ಯ ಜಿಜೆ ರಾಜಣ್ಣ, ಪುರಸಭಾಧ್ಯಕ್ಷೆ ಎಲ್. ರಾಧ, ಉಪಾಧ್ಯಕ್ಷ ಎಂಪಿ ಗಣೇಶ್ ತಾಪಂ ಅಧ್ಯಕ್ಷೆ ಇಂದಿರಾ ದೇನಾ ನಾಯ್ಕ, ಪುರಸಭಾ ಸದಸ್ಯರಾದ ಎಂ.ಕೆ.ನಂಜುಂಡರಾಜು,ಚಂದ್ರಶೇಖರ್, ಅಯ್ಯೂಬ್,ಆಲೀಮ್, ಸತ್ಯನಾರಾಯಣ್, ರಘು ಯಾದವ್, ಮಂಜುನಾಥ್,ಎಪಿಎಂಸಿ ಅಧ್ಯಕ್ಷ ಪಿಟಿ ಗೋವಿಂದಯ್ಯ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ವೆಂಕಟರಂಗಾರೆಡ್ಡಿ, ಮುಖಂಡರಾದ ಆನಂದ್ ಡಿಡಿಪಿಐ ರಾಜೇಂದ್ರ, ಬಿಇಓ ರಾಜಣ್ಣ, ತಹಶೀಲ್ದಾರ್ ಶ್ರೀನಿವಾಸ್, ಕೃಷಿ ಸಹಾಯಕ ನಿರ್ದೇಶಕ ಪರುಶುರಾಂ, ಮುಖ್ಯಾಧಿಕಾರಿ ನವೀನ್ ಚಂದ್ರ, ಶಾಲಾ ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿಗಳು, ಸಾರ್ವಜನಿಕರು ಇದ್ದರು.

**ಪ್ರಜಾಪ್ರಗತಿ ಓದಿರಿ ಪ್ರಗತಿ ಟಿವಿ ವೀಕ್ಷಿಸಿ**

# ಜೆಡಿಎಸ್ ಪದಾಧಿಕಾರಿಗಳ ನೇಮಕ



**ತುಮಕೂರು: ಜನತಾದಳ ಪರಿಶಿಷ್ಟ ಪಂಗಡ ಘಟಕದ ತುಮಕೂರು ನಗರ ಘಟಕದ ಅಧ್ಯಕ್ಷರನ್ನಾಗಿ ನಟೇಶ್ ಕುಮಾರ್ ಅವರನ್ನು ನೇಮಕ ಮಾಡಲಾಗಿದೆ.**



**ತುಮಕೂರು: ಜನತಾದಳ ಪರಿಶಿಷ್ಟ ಪಂಗಡ ಘಟಕದ ತುಮಕೂರು ಮಹಾನಗರ ಪಾಲಿಕೆಯ 1ನೇ ವಾರ್ಡ್‌ನ ಅಧ್ಯಕ್ಷರನ್ನಾಗಿ ಗಿರೀಶ್‌ಬಾಬು ಅವರನ್ನು ನೇಮಕ ಮಾಡಲಾಗಿದೆ.**



**ತುಮಕೂರು: ಜನತಾದಳ ಪರಿಶಿಷ್ಟ ಪಂಗಡ ಘಟಕದ ತುಮಕೂರು ನಗರ ಉಪಾಧ್ಯಕ್ಷರನ್ನಾಗಿ ಸಣ್ಣಪಾಲಯ್ಯ ಅವರನ್ನು ನೇಮಕ ಮಾಡಲಾಗಿದೆ.**


# PUBLIC NOTICE

My client notify that the property bearing No.58/2a New No.(58/2a1) Measuring one acre, **situate at 14th cross,link road s.s.puram,Tumkur,** belongs to **late sri.T.G. Siddahlingaiah,** Advocate and his legal Representatives.

The property was purchased by **sri. T.G. siddhlingaiah,** Advocate vide **sale deed Dated: 10-03-1971.** And he was in possession and after his demise his legal representatives are in possession of the property , the said land is not for sale nor the legal representatives are in possession of the property, the said land is not for sale nor the legal representatives intend to sell the same.

The legal representatives of **late T.G. Siddalingaiah** have reliably learnt that some unscrupulous persons who have an eye to knock of the property have created false documents by showing wrong survey number as **58/3a** and municipal **katha nos.716/1106,PID no.82557 and** with **other PID Numbers** and are trying to alienate the land in question with an intention of making wrongful gain. Hence,this public notice.

Public are hereby informed not to enter into any kind of transaction whatsoever, including mortgage, purchase, sale etc., in respect of the property in question and if any body were to do they will be doing so as to their risk and cost.

**LAND SCHEDULE**

**All that piece and parcel of the land bearning sy. No.58/2a New No.(58/2a1)** Measuring one acre, situate at 14th cross , link road , s.s.puram, Tumkur and bounded on: **East by : Property belonging to Lakshmaiah. West by : Municipal drain & road, North by : Somakatte (angala) South by : Municipal road**

For any further information or clarification, you may contact the undersigned.

**T.S. DINESH-9900999390 T.S. RAMESH- 9886330030**

**B.C. Shiva Kumar ,Advocate**
**TAPCMS Building, Tumkur.**


# ಕೇರಳದಲ್ಲಿ ಮೆಟ್ರೋ ರೈಲು ಆರಂಭ

>>>1ನೇ ಪುಟದಿಂದ ಸರ್ಕಾರ ಮೂಲ ಸೌಕರ್ಯ ಅಭಿವೃದ್ಧಿಗೆ ವಿಶೇಷ ಅಭಿವೃದ್ಧಿ ನೀಡುತ್ತಾ ಬಂದಿದೆ ಎಂದು ನರೇಂದ್ರ ಮೋದಿ ತಿಳಿಸಿದರು. ನಗರಾಭಿವೃದ್ಧಿ ಸಚಿವ ವೆಂಕಯ್ಯ ನಾಯ್ಡು ಮಾತನಾಡಿ, ಕೇಂದ್ರ ಸರ್ಕಾರ ಸಾರ್ವಜನಿಕ ಸಾರಿಗೆಗೆ ಆದ್ಯತೆ ನೀಡುತ್ತಿದೆ. ಪ್ರಯಾಣಿಕರ ದಟ್ಟಣೆ ಮತ್ತು ಪರಿಸರ ಮಾಲಿನ್ಯದ ಸಮಸ್ಯೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮೋಟಾರು ರಹಿತ ಸಾರಿಗೆ ವ್ಯವಸ್ಥೆಗೆ ಗಮನ ನೀಡಲಾಗುತ್ತಿದೆ. ಇಂತಹ ಯೋಜನೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜತೆಗೂಡಿ,ಏಕ ಕಾರ್ಯಸೂಚಿ ಅಳವಡಿಸಿಕೊಂಡು,ಯೋಜನೆ ಜಾರಿ ಮಾಡಬೇಕು. ಅದೇ ನಿಜವಾದ ಅಭಿವೃದ್ಧಿ ಎಂದು ತಿಳಿಸಿದರು.

# ಪೂರ್ವಭಾವಿ ಸಭೆ

**ತುಮಕೂರು:** ವೀರಶೈವ ಲಿಂಗಾಯಿತ ತತ್ವ ದರ್ಶನ ಪ್ರವಚನ ನಡೆಸುವ ಸಲುವಾಗಿ ಜೂ.20 ರಂದು ಸಂಜೆ 4.30 ಗಂಟೆಗೆ ವೀರಶೈವ ಕಲ್ಯಾಣ ಮಂಟಪದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ಶ್ರೀ ಗುರು ಅಟವೀಶ್ವರ ಜ್ಞಾನ ಪ್ರಸಾರ ಕೇಂದ್ರದ ಪ್ರಧಾನ ಕಾರ್ಯದರ್ಶಿ ಟಿ.ಬಿ.ಶೇಖರ್ ತಿಳಿಸಿದ್ದಾರೆ.

# ವೀರಶೈವ ವಧು-ವರರ ಸಮಾವೇಶ

**ತುಮಕೂರು**

ವೀರಶೈವ ವಧು-ವರರ 182ನೇ ಸಾಮಾನ್ಯ ಮಾಸಿಕ ಮುಖಾ-ಮುಖಿ ಸಮಾವೇಶವು ಜೂನ್ 25ರ ಭಾನುವಾರದಂದು ಮಧ್ಯಾಹ್ನ 2 ಗಂಟೆಗೆ ಲಿಂಗಾಯತ ಕಲ್ಯಾಣ ಟ್ರಸ್ಟ್, ನಂ.18/1, 6ನೇ ಕ್ರಾಸ್, 5ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು-9 ದೂರವಾಣಿ: 22269237 ಇವರನ್ನು ಸಂಪರ್ಕಿಸಬಹುದಾಗಿದೆ.

ಈ ಮುಖಾಮುಖಿ ಸಮಾವೇಶದಲ್ಲಿ ಡಾಕ್ಟರ್ಸ್, ಇಂಜಿನಿಯರ್ಸ್, ಪಿ.ಜಿ. ಪದವೀಧರರು, ಅನಿವಾಸಿ ಭಾರತೀಯರು, ಪದವೀಧರರು, ಡಿಪ್ಲೋಮಾ, ಐಟಿ.ಐ. ಎಸ್.ಎಸ್.ಎಲ್.ಸಿ, ಪಿ.ಯು.ಸಿ.ಯಲ್ಲಿ ವ್ಯಾಸಂಗ ಮಾಡಿರುವ ವೀರಶೈವ ವಧು-ವರರು ಭಾಗವಹಿಸಲಿದ್ದಾರೆ.



ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ತುಮಕೂರು ಮಹಾನಗರ ಪಾಲಿಕೆಯ 34ನೇ ವಾರ್ಡಿನಲ್ಲಿ 1500 ಗಿಡ ನೆಡುವ ಕಾರ್ಯಕ್ರಮಕ್ಕೆ ಮಾಜಿ ಮೇಯರ್ ಯಶೋಧಮ್ಮ ಶ್ರೀನಿವಾಸ್ ಚಾಲನೆ ನೀಡಿದರು. ಅರಣ್ಯ ಉಪ ವಲಯಾಧಿಕಾರಿ ವಾಸುದೇವ್, ಮಾಜಿ ಪ್ರಧಾನರಾದ ಕೆ.ಜಿ. ಆನಂದ್, ಜಯರಾಮು, ಶ್ರೀನಿವಾಸ, ಯುವ ಮುಖಂಡ ದಿನೇಶ್, ವಾಸು, ಸೈಯದ್ ಪೀರ್ ಮತ್ತು ಶಾಲಾ ಮಕ್ಕಳು ಉಪಸ್ಥಿತರಿದ್ದರು.


ಜಿಲ್ಲಾ ಪಂಚಾಯತ್, ತುಮಕೂರು

**ಉಪನಿರ್ದೇಶಕರ ಕಛೇರಿ , ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು ಉತ್ತರ, ಮಧುಗಿರಿ.**

ಸಂಖ್ಯೆ: ಸಿ1.ವಾಹನ.ಹೊರಗುತ್ತಿಗೆ.ಬಾಡಿಗೆ 30/2017-18 ದಿನಾಂಕ 12-06-2017

**ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ**

2017-18 ನೇ ಸಾಲಿನಲ್ಲಿ ಉಪನಿರ್ದೇಶಕರ ಕವೇರಿ (ಆಡಳಿತ) ಸಾ.ಶಿ.ಇಲಾಖೆ ಮಧುಗಿರಿ ಈ ಕಛೇರಿ ವತಿಯಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಹಾಗೂ ಶಾಲಾ ತಪಾಸಣೆ ಮತ್ತು ಮೇಲುಸ್ತುವಾರಿ ಮತ್ತು ಕಛೇರಿ ಉಪಯೋಗಕ್ಕಾಗಿ ವಾಹನವನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ಮೊದಲಬಾರಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ .ಆಸಕ್ತ ನೋಂದಾಯಿತ ಟ್ರಾವೆಲ್ ಏಜೆನ್ಸಿ, ಆಸಕ್ತ ನೋಂದಾಯಿತ ವಾಹನ ಮಾಲೀಕರು ಇ-ಪ್ರಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸುವುದು.

ಟೆಂಡರ್ ವೇಳಾಪಟ್ಟಿ (ಇ-ಪ್ರಕ್ಯೂರ್‌ಮೆಂಟ್ ಮೂಲಕ)

| ಕ್ರ.ಸಂ | ವಿವರ | ದಿನಾಂಕ |
|---|---|---|
| 1 | ಟೆಂಡರ್‌ನಲ್ಲಿ ಅರ್ಜಿ ವಿತರಿಸುವ ದಿನಾಂಕ | ದಿನಾಂಕ 15-06-2017 |
| 2 | ಟೆಂಡರ್ ಅರ್ಜಿ ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸುವ ದಿನಾಂಕ | 28-06-2017 ಸಂಜೆ 5.00 ಗಂಟೆಗೆ |
| 3 | ಟೆಂಡರ್ ತಾಂತ್ರಿಕ ದರಪಟ್ಟಿಗಳನ್ನು ತೆರೆಯುವ ದಿನಾಕ | 30-06-2017 ಬೆಳಿಗ್ಗೆ 10.00 ಗಂಟೆಗೆ |
| 4 | ಆರ್ಥಿಕ ಬಿಡ್ ತೆರೆಯುವ ದಿನಾಂಕ | 01-07-2017 |

ಟೆಂಡರ್ ಅರ್ಜಿ ( ಇ,ಎಂ,ಡಿ) ಇತರೆ ಹೆಚ್ಚಿನ ವಿವರಗಳಿಗೆ ಉಪನಿರ್ದೇಶಕರು ಸಾ,ಶಿ ಇಲಾಖೆ ಮಧುಗಿರಿ ಇವರನ್ನು ಕಛೇರಿ ವೇಳೆಯಲ್ಲಿ (ದೂರವಾಣಿ ಸಂಖ್ಯೆ 944899347) ಸಂಪರ್ಕಿಸಿ ಮಾಹಿತಿ ಪಡೆಯಬಹುದು

ಸಹಿ/- ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ, ಮಧುಗಿರಿ.



**ನಗರಸಭಾ ಕಾರ್ಯಾಲಯ ಹೊಸಪೇಟೆ.**

ಕ್ರಸಂ: ನಸಹೊ/ತಾಂತ್ರಿಕ/ಕಾಮಗಾರಿ/14ನೇಹಕಾ/ಜಘಗ್ರಾ/ಟೆಂಡರ್/06//2017-18 ದಿನಾಂಕ 12-06-2017

**ಟೆಂಡರಿಗಾಗಿ ಆಹ್ವಾನ (ಐ.ಎಫ್.ಟಿ) ಅಲ್ಪಾವದಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರಮೆಂಟ್ ಮುಖಾಂತರ)**

2016-17ನೇ ಸಾಲಿನ 14ನೇ ಹಣಕಾಸು ಸಾಮಾನ್ಯ ಕಾರ್ಯನಿರ್ವಹಣಾ ಅನುದಾನಿತ (General performance grant)ಯೋಜನೆಯ ನಿಧಿಯಿಂದ ಈ ಕೆಳಗಿನ ಕೆಲಸಗಳಿಗಾಗಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ (2015-2020 ನೇ ಸಾಲಿನಲ್ಲಿ ನೊಂದಾಯಿತ) ಸೂಕ್ತ ದರ್ಜೆಯಲ್ಲಿ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮಾವಳಿಯಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು. ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.eproc.karnataka .govt.in ವೆಬ್‌ಸೈಟ್ ಮೂಲಕ ಪಡೆದುಕೊಂಡು. ಸರದಿ ಇ-ಪ್ರೊಕ್ಯೂರ್‌ಮೆಂಟಿನ ಷರತ್ತಿಗೊಳಪಟ್ಟು ಭರ್ತಿಮಾಡಿದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು .

| | | |
|---|---|---|
| 1 | ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ | ದಿನಾಂಕ :28-.6-2017 ಸಂಜೆ 5.00 ಗಂಟೆವರೆಗೆ |
| 2 | ಟೆಂಡರ್‌ಗಳನ್ನು ತೆರೆಯುವ ದಿನಾಂಕ | 30-06-2017 ಸಂಜೆ 5.10ರ ಗಂಟೆ ನಂತರ |
| 3 | ಟೆಂಡರ್‌ಗಳನ್ನು ತೆರೆಯು ಸ್ಥಳ | ನಗರಸಭೆ ಹೊಸಪೇಟೆ. |

| ಕ್ರ.ಸಂ | ಪ್ಯಾಕೇಜ್ ಸಂಖ್ಯೆ | ಇಂಡೆಂಟ್ ನಂಬರ್ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಪ್ಯಾಕೇಜ್ ಸಂಖ್ಯೆ:1 | DAM/2017-18/OW/WORK-INDENT 62134 | 35.20 |
| 2 | ಪ್ಯಾಕೇಜ್ ಸಂಖ್ಯೆ:2 | DAM/2017-18/OW/WORK-INDENT 62135 | 36.60 |
| 3 | ಪ್ಯಾಕೇಜ್ ಸಂಖ್ಯೆ:3 | DAM/2017-18/RD/WORK-INDENT 62136 | 28.25 |
| 4 | ಪ್ಯಾಕೇಜ್ ಸಂಖ್ಯೆ:4 | DAM/2017-18/RD/WORK-INDENT 62137 | 37.76 |
| 5 | ಪ್ಯಾಕೇಜ್ ಸಂಖ್ಯೆ:5 | DAM/2017-18/RD/WORK-INDENT 62138 | 37.57 |

ಸಹಿ/- ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಗರಸಭೆ. ಹೊಸಪೇಟೆ — ಸಹಿ/-ಪೌರಾಯುಕ್ತರು. ನಗರಸಭೆ, ಹೊಸಪೇಟೆ — ಸಹಿ/-ಅಧ್ಯಕ್ಷರು ನಗರಸಭೆ, ಹೊಸಪೇಟೆ


# ಜು. 23 ರಿಂದ ಫೀಬಾ ಮಹಿಳಾ ಏಷ್ಯಾಕಪ್ ಪಂದ್ಯಾವಳಿ

**ಬೆಂಗಳೂರು**

ಬೆಂಗಳೂರಿನ ಶ್ರೀಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಜುಲೈ 23 ರಿಂದ 29ರವರೆಗೆ ಫೀಬಾ ಮಹಿಳಾ ಏಷ್ಯಾಕಪ್ ಪಂದ್ಯಾವಳಿ ನಡೆಯಲಿದೆ.

ಇದೇ ಮೊದಲ ಬಾರಿಗೆ ಹನ್ನೆರಡು ವರ್ಷಗಳ ಅಂದರೆ, 2005 ರ ನಂತರ ಮೊದಲ ಬಾರಿ ಬೆಂಗಳೂರಿನಲ್ಲಿ ಈ ಟೂರ್ನಿ ಜರುಗಲಿದ್ದು, ಭಾರತ ಒಳಗೊಂಡಂತೆ 15 ರಾಷ್ಟ್ರಗಳು ಇದರಲ್ಲಿ ಪಾಲ್ಗೊಳ್ಳುತ್ತಿವೆ. ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ತಂಡಗಳು ಪ್ರಥಮ ಬಾರಿಗೆ ಭಾಗವಹಿಸುತ್ತಿವೆ.

ಈ ಟೂರ್ನಿಯಲ್ಲಿ ಭಾಗವಹಿಸುತ್ತಿರುವ 15 ತಂಡಗಳನ್ನು 'ಎ ಮತ್ತು 'ಬಿ ಡಿವಿಜನ್‌ಗಳಾಗಿ ವಿಂಗಡಿಸಲಾಗಿದ್ದು, ಇದರಲ್ಲಿ 'ಎ ಮತ್ತು 'ಬಿ ಗುಂಪುಗಳಾಗಿ ವಿಭಾಗಿಸಲಾಗಿದೆ. 'ಬಿ ಡಿವಿಜನ್ 'ಎ ಗುಂಪು ಹೊರತುಪಡಿಸಿ ಇತರ ಮೂರು ಗುಂಪುಗಳಲ್ಲಿ ತಲಾ ನಾಲ್ಕು ತಂಡಗಳು ಸ್ಥಾನ ಪಡೆದಿವೆ.

'ಬಿ ಡಿವಿಜನ್ 'ಎ ಗುಂಪಿನಲ್ಲಿ ಶ್ರೀಲಂಕಾ, ಉಜ್ಬೇಕಿಸ್ಥಾನ ಜೊತೆ ಭಾರತ ಸ್ಥಾನ ಗಳಿಸಿದೆ. ಎರಡು ಡಿವಿಜನ್ ಗ್ರೂಪ್ ಹಂತದ ಪಂದ್ಯಗಳು ಜುಲೈ 23 ರಿಂದ 25ರವರೆಗೆ ನಡೆದರೆ ಜುಲೈ 27 ರಿಂದ 29 ರವರೆಗೆ ಅಂತಿಮ ಹಂತದ ಪಂದ್ಯಗಳು ನಡೆಯಲಿವೆ.

# ಜೂಜಾಟ: 5 ಮಂದಿ ಬಂಧನ

**ಮಧುಗಿರಿ**

ತಾಲ್ಲೂಕಿನ ದೊಡ್ಡೇರಿ ಹೋಬಳಿ ಕಾರ್ಪೇನಹಳ್ಳಿ ಕೆರೆಯಂಗಳದಲ್ಲಿ ಗುರುವಾರ ಸಂಜೆ ಜೂಜಾಟದಲ್ಲಿ ತೊಡಗಿದ್ದ 5 ಮಂದಿಯನ್ನು ಪೊಲೀಸರು ಬಂಧಿಸಿ, ಅವರುಗಳಿಂದ ಪಣಕ್ಕಿಟ್ಟಿದ್ದ 5210 ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ.

ಈ ಬಗ್ಗೆ ಬಡವನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಭ್ರಷ್ಟ ಸಮಾಜವನ್ನು ಬದಲಿಸಿ -ಸಂತೋಷ್ ಹೆಗ್ಡೆ

>>>1ನೇ ಪುಟದಿಂದ 1 ಲಕ್ಷ 62 ಸಾವಿರ ರೂ. ಮೊತ್ತದ ವಾರ್ಷಿಕ ಬಜೆಟ್‌ಗಿಂತ ದೊಡ್ಡದಾಗಿದೆ. ರಾಜೀವ್ ಗಾಂಧಿ ಅವರು 1985 ರಲ್ಲಿ ಪ್ರಧಾನಿ ಆಗಿದ್ದಾಗ ಸರ್ಕಾರದ ಒಂದು ರೂಪಾಯಿ ವೆಚ್ಚದಲ್ಲಿ ಕೇವಲ 15 ಪೈಸೆ ಮಾತ್ರ ಅಭಿವೃದ್ಧಿಗೆ ವಿನಿಯೋಗವಾಗುತ್ತಿದೆ ಎಂದಿದ್ದರು. ಆದರೆ ಈಗ 2017 ರಲ್ಲಿ ಒಂದು ರೂಪಾಯಿಯಿರಲಿ, 10 ರೂಪಾಯಿಯಲ್ಲಿ ಅಭಿವೃದ್ಧಿಗೆ ಎಷ್ಟು ಹಣ ಸಲ್ಲುತ್ತಿರಬಹುದೆಂಬುದನ್ನು ನೀವೇ ಊಹಿಸಿ ಎಂದು ಹೇಳಿದರು.

''ನಾನು ಲೋಕಾಯುಕ್ತ ಆಗುವ ಮೊದಲು ಸಮಾಜ ಸುಖವಾಗಿದೆ ಎಂದೇ ಭಾವಿಸಿದ್ದೆ. ನಾನು ಸುಖವಾಗಿದ್ದುದರಿಂದ ಎಲ್ಲವೂ ಸರಿಯಾಗಿದೆಯೆಂದೇ ತಿಳಿದಿದ್ದೆ. ಆದರೆ ಲೋಕಾಯುಕ್ತ ಆದ ಬಳಿಕ ಸರ್ಕಾರದಿಂದ ಜನರಿಗಾಗುತ್ತಿರುವ ಅನ್ಯಾಯಗಳ ಸರಮಾಲೆಯೇ ನನ್ನ ಅರಿವಿಗೆ ಬಂತು ಎನ್ನುತ್ತ ಆಡಳಿತ ವ್ಯವಸ್ಥೆಯಿಂದ ಸಾರ್ವಜನಿಕರಿಗೆ ಆಗುತ್ತಿರುವ ಹಲವು ರೀತಿಯ ಅನ್ಯಾಯ, ಭ್ರಷ್ಟಾಚಾರ ಮತ್ತು ಅಮಾನವೀಯ ಪ್ರಸಂಗಗಳನ್ನು ಉಲ್ಲೇಖಿಸಿದರು.

''ಲೋಕಾಯುಕ್ತನಾಗಿ ಕಾರ್ಯನಿರ್ವಹಿಸಿ ನಿವೃತ್ತಿ ಆದ ಬಳಿಕ ಈ ಸಮಾಜ ಶ್ರೀಮಂತಿಕೆ ಮತ್ತು ಅಧಿಕಾರವನ್ನಷ್ಟೇ ಬೆಂಬಲಿಸುತ್ತಿದೆಯೇ? ಪ್ರಾಮಾಣಿಕರನ್ನು ಗೌರವಿಸುತ್ತಿಲ್ಲವೇ? ಎಂದು ಅನಿಸುತ್ತಿದೆ ಎಂದು ಸಂತೋಷ್ ಹೆಗ್ಡೆ ಅವರು ವಿಷಾದದಿಂದ ಉದ್ಗರಿಸುತ್ತ, ''ನಮ್ಮ ಹಿರಿಯರಲ್ಲಿ ಮೌಲ್ಯಗಳು ಇದ್ದವು. ಆದರೆ ಈಗ ಆ ಮೌಲ್ಯಗಳು ಕಾಣೆಯಾಗಿವೆ. ಪ್ರಾಮಾಣಿಕರನ್ನು ನೋಡಿದರೆ 'ಈತ ತಾನೂ ತಿನ್ನುವುದಿಲ್ಲ-ಬೇರೆಯವರಿಗೆ ತಿನ್ನಲೂ ಬಿಡುವುದಿಲ್ಲ ಎಂದು ಹೇಳುವವರು ಹೆಚ್ಚುತ್ತಿದ್ದಾರೆ. ಹೀಗಾಗಿ ನಮ್ಮ ಸಮಾಜ ಇಂದಿನ ಸ್ಥಿತಿಗೆ ತಲುಪಿದೆ ಎಂದು ನೊಂದು ನುಡಿದರು.

''ಸಂಸತ್ತಿನಲ್ಲಿ ಜನರ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯದೆ, ಕಲಾಪಗಳು ಗದ್ದಲಗಳಲ್ಲೇ ಮುಗಿಯುತ್ತಿದೆ. ಸಂಸತ್ತಿನ ಒಂದು ದಿನದ ಕಲಾಪಕ್ಕೆ 10 ಕೋಟಿ ವೆಚ್ಚವಾಗುತ್ತಿದೆ. ಜನಪ್ರತಿನಿಧಿಗಳಿಗೆ ಹಲವು ಸವಲತ್ತುಗಳಿವೆ. ಆದರೆ ಅದಕ್ಕನುಗುಣವಾಗಿ ಅವರು ಕಾರ್ಯನಿರ್ವಹಿಸುತ್ತಿದ್ದಾರೆಯೇ ಎಂಬುದು ಪ್ರಶ್ನಾರ್ಹವಾಗಿದೆ. ಇದು ನಮ್ಮ ಶಾಸಕಾಂಗದ ಸ್ಥಿತಿ. ಇನ್ನು ಕಾರ್ಯಾಂಗದಲ್ಲಿ ಅಧಿಕಾರಿಗಳು ತಾವು ಹಣ ಕೊಟ್ಟು ಬಂದಿರುವುದಾಗಿ ಹೇಳುವಾಗ, ಕಾರ್ಯನಿರ್ವಹಣೆಯ ಗುಣಮಟ್ಟವನ್ನು ಊಹಿಸಿಕೊಳ್ಳಬಹುದು. ದಕ್ಷರನ್ನು ಆಯ್ಕೆ ಮಾಡಬೇಕಾದ ಲೋಕಸೇವಾ ಆಯೋಗಗಳೇ ಭ್ರಷ್ಟಾಚಾರದ ಹಗರಣಗಳಲ್ಲಿ ಸಿಲುಕಿವೆ. ಇನ್ನು ನ್ಯಾಯಾಂಗದಲ್ಲಿ ಪ್ರಕರಣಗಳು ಇತ್ಯರ್ಥಗೊಳ್ಳಲು ದೀರ್ಘಕಾಲವಾಗುತ್ತಿದ್ದು, ಪ್ರಕ್ರಿಯೆಯೇ ವಿಳಂಬ ಸ್ವರೂಪವಾಗಿದೆ. ಅಮೇರಿಕಾದಲ್ಲಿರುವಂತೆ ಮೊದಲನೇ ನ್ಯಾಯಾಲಯ ಮತ್ತು ಎರಡನೇ ನ್ಯಾಯಾಲಯ ಎಂಬಂತೆ ನಮ್ಮಲ್ಲೂ ಶೀಘ್ರ ವಿಲೇವಾರಿ ಬಗ್ಗೆ ಸಲಹೆಯಿತ್ತರೂ ಯಾರೂ ಚರ್ಚಿಸುತ್ತಿಲ್ಲ, ಪ್ರಜಾಪ್ರಭುತ್ವದ ಈ ಅಧಿಕೃತ ಮೂರು ಅಂಗಗಳ ಸ್ಥಿತಿ ಹೀಗಿದೆ. ಜನರಿಂದ ನಾಲ್ಕನೆಯ ಅಂಗವೆಂದು ಗುರುತಿಸಲ್ಪಟ್ಟಿರುವ ಮಾಧ್ಯಮ ರಂಗದಲ್ಲೂ ಹಣ ನೀಡಿ ಸುದ್ದಿ ಬರೆಸಲಾಯಿತೆಂಬ ನೀರಾ ರಾಡಿಯಾ ಪ್ರಕರಣ ಕಣ್ಮುಂದೆ ಇದೆ ಎಂದು ಪ್ರಚಲಿತ ವಿದ್ಯಮಾನಗಳನ್ನು ಅವರು ಚರ್ಚಿಸಿದರು.




**ತೃಪ್ತಿ ಮತ್ತು ಮಾನವೀಯತೆ**

''ತೃಪ್ತಿ ಮತ್ತು ಮಾನವೀಯತೆ ಎಂಬ ಎರಡು ಧ್ಯೇಯಗಳನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಿ'' ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದ ಸಂತೋಷ್ ಹೆಗ್ಡೆ ಅವರು, ''ಮನುಷ್ಯನಿಗೆ ಆಸೆ ಇರಬೇಕು. ವಿದ್ಯಾವಂತನಾಗಿ ನ್ಯಾಯೋಚಿತವಾಗಿ ಸಂಪಾದಿಸಬೇಕು. ನ್ಯಾಯಬದ್ಧವಾಗಿ ತೆರಿಗೆ ಪಾವತಿಸಿ, ಎಷ್ಟಾದರೂ ಸಂಪತ್ತು ಗಳಿಸಬಹುದು. ಆದರೆ ಆಸೆ ಅತಿಯಾದಾಗ ಎಚ್ಚರ ತಾಳಬೇಕು. ಒಮ್ಮೆ ದುರಾಸೆ ಬಂತೆಂದರೆ ಅದಕ್ಕೆ ಕೊನೆಯೇ ಇರುವುದಿಲ್ಲ, ಇನ್ನೊಬ್ಬರ ಜೇಬಿಗೆ ಕೈಹಾಕಿ ಅದನ್ನು ದೋಚಬಾರದು. ಆದ್ದರಿಂದ ತೃಪ್ತಿ ಇರಬೇಕು. ಜೊತೆಗೇ ಮಾನವೀಯತೆ ಬೆಳೆಸಿಕೊಳ್ಳಬೇಕು. ಜನರಿಗೆ ಮತ್ತು ಸಮಾಜಕ್ಕೆ ನಮ್ಮಿಂದ ಆಗುವಷ್ಟು ಒಳ್ಳೆಯ ಕೆಲಸಗಳನ್ನು ಮಾಡಬೇಕು ಎಂದು ಹೇಳಿದರು.

**ಹಣವೇ ಇಂದು ಮೌಲ್ಯವಾಗಿದೆ**

''ಹಿಂದೆ ಪೋಷಕರು ನಮಗೆ ಸರಿಯಾದುದು ಯಾವುದು ಹಾಗೂ ತಪ್ಪು ಯಾವುದು ಎಂಬುದನ್ನು ತಿಳಿಸಿಕೊಡುತ್ತಿದ್ದರು. ಆದರೆ ಇಂದು ಆ ವಾತಾವರಣ ಕಾಣೆಯಾಗಿದೆ. ಶಾಲೆಗಳಲ್ಲಿ ನೀತಿ ಶಿಕ್ಷಣ ತರಗತಿಗಳೇ ಇಲ್ಲದಂತಾಗಿದೆ. ಸಮಾಜದಲ್ಲಿ ಹಣವೇ ಇಂದು ಮೌಲ್ಯ ಆಗಿಬಿಟ್ಟಿದೆ ಎಂದು ಉದ್ಗರಿಸಿದರಲ್ಲದೆ, ''ವಿದ್ಯಾರ್ಥಿಗಳು ಇದಕ್ಕೆ ಬಲಿಯಾಗದೆ ಹೊಸ ಸಮಾಜ ನಿರ್ಮಿಸಬೇಕು ಎಂದು ಪುನರುಚ್ಚರಿಸಿದರು.

ಪ್ರಾಸ್ತಾವಿಕ ಭಾಷಣ ಮಾಡಿದ ಪಾವಗಡ ಶ್ರೀರಾಮಕೃಷ್ಣ ಸೇವಾಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ಜಪಾನಂದಜಿ ಅವರು, ಆರೋಗ್ಯ ಮತ್ತು ಅಕ್ಷರಗಳ ಮೇಲೆ ದೇಶದ ಭವಿಷ್ಯ ನಿಂತಿದೆ. ದೇಶ ಇರುವುದು ಮುಂಬೈ, ದೆಹಲಿಗಳಂಥ ನಗರಗಳಲ್ಲಲ್ಲ, ದೇಶ ಇರುವುದು ಹಳ್ಳಿಗಳಲ್ಲಿ, ಆದ್ದರಿಂದ ಹಳ್ಳಿಗಳಲ್ಲಿರುವ ರೈತರ ಅಭ್ಯುದಯಕ್ಕೆ ಆದ್ಯತೆ ಲಭಿಸಬೇಕು. ದೇಶ ಉಳಿಯುವುದು ಷೇರುಪೇಟೆ ಸೂಚ್ಯಂಕದಿಂದಲ್ಲ, ಮೌಲ್ಯಗಳಿಂದ ಎಂದು ವಿವರಿಸಿದರು.

ಕಾಲೇಜು ಸಮಿತಿ ಅಧ್ಯಕ್ಷರೂ ಆದ ತುಮಕೂರು ಶಾಸಕ ಡಾ. ಎಸ್.ರಫೀಕ್ ಅಹಮದ್ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕ ಎಸ್. ಷಫಿ ಅಹಮದ್, ಮಾಜಿ ಟೂಡಾ ಅಧ್ಯಕ್ಷ ರೆಡ್ಡಿ ಚಿನ್ನಯಲ್ಲಪ್ಪ, ವಕೀಲ ಟಿ.ಎಸ್.ನಿರಂಜನ್, ಪಿ.ಯು. ಡಿಡಿಪಿಐ ಕೆ.ಕೃಷ್ಣಸ್ವಾಮಿ ಮತ್ತಿತರರು ವೇದಿಕೆಯಲ್ಲಿದ್ದರು. ಪ್ರಾಚಾರ್ಯ ಡಿ.ಕೆ. ಜಯರಾಮಯ್ಯ ಸ್ವಾಗತಿಸಿದರು.

**ನೀರು ಸ್ವಾಮೀಜಿಯಷ್ಟೇ ಅಲ್ಲ, ಮೇವು ಸ್ವಾಮೀಜಿಯೂ ಹೌದು**

ನ್ಯಾ. ಸಂತೋಷ್ ಹೆಗ್ಡೆ ಅವರು 1983 ರಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ನಜೀರ್ ಸಾಬ್ ಅವರನ್ನು ನೆನೆಯುತ್ತಲೇ ತಮ್ಮ ಮಾತನ್ನು ಆರಂಭಿಸಿದರು. ''ಆಗ ನೀರಿಗೆ ತುಂಬ ಸಮಸ್ಯೆ ಇತ್ತು. ನಜೀರ್ ಸಾಬ್ ಅವರು ಹಳ್ಳಿ ಹಳ್ಳಿಗಳಲ್ಲಿ ಕೊಳವೆ ಬಾವಿ ಕೊರೆಸಿ ಜನತೆಗೆ ನೀರನ್ನು ನೀಡುವ ಮೂಲಕ ನೀರು ಸಾಬರೆಂದೇ ಖ್ಯಾತಿ ಪಡೆದಿದ್ದರು. ಅದೇ ರೀತಿ ಇಂದು ಸ್ವಾಮಿ ಜಪಾನಂದಜಿಯವರೂ ಪಾವಗಡದಲ್ಲಿ ಜನತೆಗೆ ಸ್ಪಂದಿಸುತ್ತಿದ್ದಾರೆ. ಆದ ಕಾರಣ ಇವರು 'ನೀರು ಸ್ವಾಮೀಜಿ ಮಾತ್ರ ಅಲ್ಲ, ಜಾನುವಾರುಗಳ ರಕ್ಷಣೆಗಾಗಿ ಮೇವನ್ನೂ ವಿತರಿಸುತ್ತಿರುವುದರಿಂದ 'ಮೇವು ಸ್ವಾಮೀಜಿ ಎಂದೂ ಎನಿಸಿದ್ದಾರೆ ಎಂದು ಉದ್ಗರಿಸಿದರು.